ಇ) ಹೊಸದಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಮಾನದಂಡಗಳು:–

1) 5 ಕಿ.ಮೀ. ಅಂತರದಲ್ಲಿ ಸರ್ಕಾರಿ/ಅನುದಾನಿತ ಪ್ರೌಢಶಾಲೆಗಳು ಇರಬಾರದು (ಪಟ್ಟಣ ಪ್ರದೇಶಕ್ಕೆ ಇದು ಅನ್ವಯಿಸುವುದಿಲ್ಲ)

2) ಪ್ರೌಢಶಾಲೆ ಪ್ರಾರಂಭಿಸುವ ಸ್ಥಳದಲ್ಲಿ 8ನೇ ತರಗತಿಗೆ ದಾಖಲಾಗಲು ಕನಿಷ್ಟ 50 ಮಕ್ಕಳು ಲಭ್ಯವಿರಬೇಕು.

3) ಸ್ಥಳೀಯರು ರೂ. 1 ಲಕ್ಷ ದೇಣಿಗೆ ನೀಡಬೇಕು.

4) ಪ್ರೌಢಶಾಲೆ ನಿರ್ಮಿಸಲು ಸ್ಥಳೀಯರು ನಿವೇಶನ ನೀಡಬೇಕು.

5) ಸರ್ಕಾರಿ ಕಟ್ಟಡ ನಿರ್ಮಿಸುವವರೆಗೂ ಸ್ಥಳೀಯರು ಪ್ರೌಢಶಾಲೆಗಳಿಗಾಗಿ ಬಾಡಿಗೆ ಕಟ್ಟಡ ನೀಡಬೇಕು.

ಪ್ರತಿ ತರಗತಿಯಲ್ಲಿ ಮಕ್ಕಳ ಸಂಖ್ಯೆ 70ಕ್ಕಿಂತ ಹೆಚ್ಚಿದ್ದಲ್ಲಿ ಒಂದು ಹೆಚ್ಚುವರಿ ವಿಭಾಗವನ್ನು ಮಂಜೂರು ಮಾಡಬಹುದು.

ಈ) ಅಗತ್ಯತೆಗೆ ಅನುಗುಣವಾಗಿ ಹೆಚ್ಚುವರಿ ವಿಭಾಗಗಳನ್ನು ಮಂಜೂರು ಮಾಡುವ ಕ್ರಮ ಸತತವಾದ ಕ್ರಮವಾಗಿದೆ.

ಉ) ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ 09 ಸ್ಥಳಗಳಲ್ಲಿ ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲು ಪ್ರಸ್ತಾವನೆ ಸ್ವೀಕೃತವಾಗಿದೆ.

503 (864) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಾಲೇಜು ಶಿಕ್ಷಣ ಇಲಾಖೆಗೆ ಮಂಜೂರಾಗಿರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ ಎಷ್ಟು; ಈ ಪೈಕಿ ಎಷ್ಟು ಭರ್ತಿಯಾಗಿವೆ ಹಾಗೂ ಎಷ್ಟು ಖಾಲಿ ಇವೆ; ಎಷ್ಟು ಉಪನ್ಯಾಸಕರ ಹುದ್ದೆಗಳ ಕೊರತೆ ಇದೆ (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಈ ಹುದ್ದೆಗಳ ಪೈಕಿ ಎಷ್ಟು ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ ಹಾಗೂ ಎಷ್ಟು ಜನ ಉಪನ್ಯಾಸಕರು ಯೋಜನೆಯ ಮೇಲೆ ಮತ್ತು ಓ.ಓ.ಡಿ. ಆಧಾರದ ಮೇಲೆ ಇಲಾಖೆಯಿಂದ ಹೊರಗಡೆ ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಎಷ್ಟು ಅವಧಿಯಿಂದ ಇವರುಗಳು ಇಲಾಖೆಯು ಹೊರಗಡೆ ಕಾರ್ಯನಿರ್ವಹಿಸುತ್ತಿದ್ದಾರೆ. (ನಿಯೋಜನೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ಹೆಸರು ಕಾರ್ಯನಿರ್ವಹಿಸುತ್ತಿರುವ ಸ್ಥಳ ಹಾಗೂ ಇವರ ವೇತನ ಶ್ರೇಣಿಯ ವಿವರಗಳನ್ನು ಒದಗಿಸುವುದು);

ಇ) ಇಲಾಖೆಯಲ್ಲಿ ಉಪನ್ಯಾಸಕರ ಕೊರತೆ ಇದ್ದು ಇದರಿಂದಾಗಿ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವ ಸಲುವಾಗಿ ಸರ್ಕಾರವು ಹಲವಾರು ವರ್ಷಗಳಿಂದ ನಿರಂತರವಾಗಿ ನಿಯೋಜನೆ ಮತ್ತು ಒಓಡಿ ಮೇಲೆ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳನ್ನು ಹಿಂದಕ್ಕೆ ಕರೆಸಿಕೊಂಡು ಇನ್ನು ಮುಂದೆ ನಿಯೋಜನೆ ನೀಡುವುದನ್ನು ರದ್ದುಪಡಿಸುವ ಬಗ್ಗೆ ಕ್ರಮಕೈಗೊಳ್ಳುವುದೇ?

ಶ್ರೀ ಡಿ.ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):

ಅ) ಮಂಜೂರಾಗಿರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ: 3295. ಈ ಪೈಕಿ 2525 ಹುದ್ದೆಗಳು ಭರ್ತಿಯಾಗಿದೆ. 770 ಹುದ್ದೆಗಳು ಖಾಲಿ ಇರುತ್ತವೆ. ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಆ) ಒಟ್ಟು 770 ಉಪನ್ಯಾಸಕರ ಹುದ್ದೆಗಳು ಖಾಲಿ ಇರುತ್ತವೆ. ಹಾಗೂ 13 ಉಪನ್ಯಾಸಕರು ಮೇಲೆ ಹೊರಗಡೆ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ಹೆಸರು ಕಾರ್ಯನಿರ್ವಹಿಸುತ್ತಿರುವ ಸ್ಥಳ ಹಾಗೂ ವೇತನ ಶ್ರೇಣಿಯ ವಿವರಗಳನ್ನು ಅನುಬಂಧ–2ರಲ್ಲಿ ತಿಳಿಸಲಾಗಿದೆ.

ಇ) ಇಲಾಖೆಯಲ್ಲಿ ಉಪನ್ಯಾಸಕರ ಕೊರತೆ ಇದ್ದು, ಈ ರೀತಿ ನಿಯೋಜನೆ ಮೇಲೆ ಕಳುಹಿಸುವುದರಿಂದ, ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆ ಉಂಟಾಗುತ್ತಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೈಕ್ಷಣಿಕ ವಿಭಾಗವನ್ನು ಹೊರತುಪಡಿಸಿ ಇತರೆ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಮಾತೃ ಇಲಾಖೆಗೆ ಹಿಂದಕ್ಕೆ ಪಡೆಯಲು ದಿನಾಂಕ: 22–04–2005ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ.

ಕಾಲೇಜು ಶಿಕ್ಷಣ ಇಲಾಖೆ **ಅನುಬಂಧ–1**

ಉಪನ್ಯಾಸಕರ ಹುದ್ದೆಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆ	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
1	ಬಾಗಲಕೋಟೆ	20	7	13
2	ಬೆಂಗಳೂರು (ನ)	544	399	25
3	ಬೆಂಗಳೂರು (ಗ್ರಾಮ)	113	88	25
4	ಬೆಳಗಾವಿ	46	27	19
5	ಬಳ್ಳಾರಿ	93	72	21
6	ಬೀದರ್	25	23	2
7	ಬಿಜಾಪುರ	20	9	11
8	ಚಾಮರಾಜನಗರ	41	31	10
9	ಚಿಕ್ಕಮಗಳೂರು	135	124	11
10	ಚಿತ್ರದುರ್ಗ	159	130	29
11	ದಕ್ಷಿಣ ಕನ್ನಡ	95	88	7
12	ದಾವಣಗೆರೆ	53	58	5
13	ಧಾರವಾಡ	80	62	18

14	ಗದಗ	42	27	15
15	ಗುಲ್ಬರ್ಗಾ	171	135	36
16	ಹಾಸನ	242	153	89
17	ಹಾವೇರಿ	50	31	19
18	ಕೊಡಗು	23	22	1
19	ಕೋಲಾರ	285	214	71
20	ಕೊಪ್ಪಳ	31	26	5
21	ಮಂಡ್ಯ	136	113	23
22	ಮೈಸೂರು	331	249	82
23	ರಾಯಚೂರು	54	36	18
24	ಶಿವಮೊಗ್ಗ	127	96	31
25	ತುಮಕೂರು	227	195	32
26	ಉಡುಪಿ	66	46	20
27	ಉತ್ತರ ಕನ್ನಡ	76	64	12
		3295	**2525**	**770**

ಕಾಲೇಜು ಶಿಕ್ಷಣ ಇಲಾಖೆ **ಅನುಬಂಧ–2**

ಕಾಲೇಜು ಶಿಕ್ಷಣ ಇಲಾಖೆಯಿಂದ ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರ ಬಗ್ಗೆ ವಿವರ.

ಕ್ರ.ಸ.	ಹೆಸರು, ಪದನಾಮ ಮತ್ತು ವಿಳಾಸ ಶ್ರೀ/ಶ್ರೀಮತಿ.	ಯಾವ ಇಲಾಖೆಗೆ ನಿಯೋಜಿಸಲಾಗಿದೆ.	ಎಷ್ಟು ವರ್ಷಗಳಿಂದ ನಿಯೋಜನೆ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ	ವೇತನ ಶ್ರೇಣಿ	ಷರಾ
1	2	3	4	5	6
1	ನರಸಿಂಹಮೂರ್ತಿ. ಆರ್. ಕನ್ನಡ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಬಾಲಕರ ಕಾಲೇಜು, ಕೋಲಾರ	ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಮುಖ್ಯ ಮಂತ್ರಿಯವರ ಕಛೇರಿ, ವಿಧಾನಸೌಧ, ಬೆಂಗಳೂರು	10 ವರ್ಷ	12000 18300 (ಯುಬಿಸಿ ವೇತನ ಶ್ರೇಣಿ)	–
2	ಚನ್ನನರಸಿಂಹಪ್ಪ ರಾಜ್ಯಶಾಸ್ತ್ರ ಉಪನ್ಯಾಸಕರು ಸರ್ಕಾರಿ ಬಾಲಕರ ಕಾಲೇಜು ಚಿಂಡಾಮಣಿ	ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಜಿಲ್ಲಾಧಿಕಾರಿ. ರಾಯಚೂರು	5 ವರ್ಷ	8000 13500 (ಯುಬಿಸಿ ವೇತನ ಶ್ರೇಣಿ)	–

1	2	3	4	5	6
3.	ಕೊಟ್ರಯ್ಯ ಎ.ಎಂ.ಆರ್., ರಸಾಯನಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು	ಲೈಸನ್ ಆಫೀಸರ್, ಎನ್.ಎಸ್.ಎಸ್. ಸೆಲ್. ವಾರ್ತಾ ಮತ್ತು ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ. ಬೆಂಗಳೂರು.	05 ವರ್ಷ	12000 18300 (ಯುಜಿಸಿ ವೇತನ ಶ್ರೇಣಿ)	–
4.	ಗೋವಿಂದೇಗೌಡ, ಎಸ್.ಎನ್. ರಾಜ್ಯಶಾಸ್ತ್ರ ಆಯ್ಕೆ ಶ್ರೇಣಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ಬೂರು	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ. ಹಾಸನ.	05 ವರ್ಷ 18300	12000	ಇವರ ಸೇವೆಯನ್ನು ಸರ್ಕಾರದ ಅಧಿ (ಯುಜಿಸಿ ಸೂಚನೆ ಸಂಖ್ಯೆ ಇಡಿ ಶ್ರೇಣಿ) 30 ಡಿಸಿಇ 2006. ದಿ: 22.4.06ರಲ್ಲಿ ಇವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದಕ್ಕೆ ಪಡೆಯಲಾಗಿದೆ. ಆದರೆ, ಇವರು ನಿಯೋಜನೆ ಹುದ್ದೆಯಿಂದ ಬಿಡುಗಡೆ ಹೊಂದಿರುವುದಿಲ್ಲ.
5	ವಸಂತರಾಜಶೆಟ್ಟಿ ಅರ್ಥಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು, ಐಡಿಎಸ್‌ಜಿ ಸರ್ಕಾರಿ ಕಾಲೇಜು, ಚಿಕ್ಕಮಗಳೂರು	ಜಿಲ್ಲಾ ಹಿಂದುಳಿಡ ಮತ್ತು ಅಲ್ಪಸಂಖ್ಯಾತರ ಅಧಿಕಾರಿ. ಕಾರವಾರ. 15200	5 ವರ್ಷ	10000	ಇವರ ಸೇವೆಯನ್ನು ಸರ್ಕಾರದ ಅಧಿ (ಯುಜಿಸಿ ಸೂಚನೆ ಸಂಖ್ಯೆ ಇಡಿ 30 ವೇತನ ಸಿಇ 2006, ಶ್ರೇಣಿ) ದಿ :22.04.06ರಲ್ಲಿ ಇವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದಕ್ಕೆ ಪಡೆಯಲಾಗಿದೆ. ಆದರೆ, ಇವರು ನಿಯೋಜನೆ ಹುದ್ದೆಯಿಂದ ಬಿಡುಗಡೆ ಹೊಂದಿರುವುದಿಲ್ಲ.

1	2	3	4	5	6
6	ಎಂ.ಜಿ. ಶಂಕರಲಿಂಗೇಗೌಡ, ಪ್ರಾಣಿಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ	ಜಿಲ್ಲಾ ಹಿಂದುಳಿದ ಅಲ್ಪಸಂಖ್ಯಾತರ ಅಧಿಕಾರಿ. ಹಾಸನ.	09 ವರ್ಷ	12000 18300 (ಯುಜಿಸಿ ವೇತನ ಶ್ರೇಣಿ)	ಇವರ ಸೇವೆಯನ್ನು ಸರ್ಕಾರದ ಅಧಿ ಸೂಚನೆ ಸಂಖ್ಯೆ ಇಡಿ 30 ಡಿಸಿಇ 2006. ದಿ: 22.4.06ರಲ್ಲಿ ಇವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದಕ್ಕೆ ಪಡೆಯಲಾಗಿದೆ. ಆದರೆ, ಇವರು ನಿಯೋಜನೆ ಹುದ್ದೆಯಿಂದ ಬಿಡುಗಡೆ ಹೊಂದಿರುವುದಿಲ್ಲ.
7.	ಡಿ. ಆಂಜನಪ್ಪ ಕನ್ನಡ ಉಪನ್ಯಾಸಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನರಸಿಂಹ ರಾಜಪುರ	ಕರ್ನಾಟಕ ಪರಿಶಿಷ್ಟ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಉಡುಪಿ	06 ತಿಂಗಳೂ	10000–15200 (ಯುಜಿಸಿ ವೇತನ ಶ್ರೇಣಿ)	ಇವರ ಸೇವೆಯನ್ನು ಸರ್ಕಾರದ ಅಧಿ ಸೂಚನೆ ಸಂಖ್ಯೆ ಇಡಿ 30 ಡಿಸಿಇ 2006. ದಿ: 22.4.06ರಲ್ಲಿ ಇವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದಕ್ಕೆ ಪಡೆಯಲಾಗಿದೆ. ಆದರೆ, ಇವರು ನಿಯೋಜನೆ ಹುದ್ದೆಯಿಂದ ಬಿಡುಗಡೆ ಹೊಂದಿರುವುದಿಲ್ಲ.
8.	ಡಾ: ಫಾರೂಕ್ ಅಹ್ಮದ್. ವಾಣಿಜ್ಯ ಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ್	ಪ್ರಾಂಶುಪಾಲರು ಜಿಲ್ಲಾ ತರಬೇತಿ ಸಂಸ್ಥೆ. ಬೀದರ್	08 ತಿಂಗಳು	10000–15200 (ಯುಜಿಸಿ ವೇತನ ಶ್ರೇಣಿ)	–

1	2	3	4	5	6
9.	ಚಿಂತಾಮಣಿ ಎಂ.ಎ. ಕನ್ನಡ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಬೈಲಹೊಂಗಲ	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	03 ವರ್ಷ	12000–18300 (ಯುಜಿಸಿ ವೇತನ ಶ್ರೇಣಿ)	–
10.	ಡಾ: ವಿಜಯ. ಎಸ್.ಎಸ್. ಕನ್ನಡ ಹಿರಿಯ ಶ್ರೇಣಿ ಉಪನ್ಯಾಸಕರು. ಸರ್. ಎಂ.ವಿ. ಕಲಾ ಮತ್ತು ವಾಣಿಜ್ಯ ಕಾಲೇಜು. ಭದ್ರಾವತಿ.	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	03 ವರ್ಷ	10000–15200 (ಯುಜಿಸಿ ಶ್ರೇಣಿ)	–
11.	ಡಾ: ವಿಜಯಕುಮಾರಿ ಎಸ್. ಕರಿಕರ್, ಕನ್ನಡ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಕಾಲೇಜು, ಗುಲ್ಬರ್ಗಾ,	ಮಹಿಳಾ ವಿಶ್ವವಿದ್ಯಾಲಯ. ಬಿಜಾಪುರ	03 ವರ್ಷ	12000–18300 (ಯುಜಿಸಿ ವೇತನ ಶ್ರೇಣಿ)	–
12.	ಡಾ: ವಿಜಯ ಬಿ. ಕೋರಿಶೆಟ್ಟಿ ಸಮಾಜಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	03 ವರ್ಷ	10000–15200 (ಯುಜಿಸಿ ವೇತನ ಶ್ರೇಣಿ)	–
13.	ಶ್ರೀನಿವಾಸರೆಡ್ಡಿ, ಭೂವಿಜ್ಞಾನ ಉಪನ್ಯಾಸಕರು, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು	ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು	02 ವರ್ಷ	12000–18300 (ಯುಜಿಸಿ ವೇತನ ಶ್ರೇಣಿ)	–

504 (865) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):– ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ಎರಡು ವರ್ಷಗಳಿಂದ ಇಲ್ಲಿಯವರೆಗೂ ಬೀದರ್ ಜಿಲ್ಲೆಯಲ್ಲಿ ವಿವಿಧ ವಸತಿ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ಇದೇ ಅವಧಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿತ್ತು (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು):